**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.5/ಪ್ರಾ.ಸಾ.3)**

ತಾಃ 08-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ರಮೇಶ್.ವೈ.ಆರ್. |
| ತಂದೆಯ ಹೆಸರು | ಆರ್.ರಾಜಣ್ಣ |
| ವಯಸ್ಸು | 49 ವರ್ಷ |
| ಉದ್ಯೋಗ | ಸಹಾಯಕ ಇಂಜಿನಿಯರ್, ಮೇಜರ್ ರೋಡ್ ವಿಭಾಗ, ಮಹದೇವಪುರ, ಬೆಂಗಳೂರು |
| ವಾಸ ಸ್ಥಳ | ಬೆಂಗಳೂರು |

<u>**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**</u>

1. ನಾನು ಜನವರಿ 2018 ರಿಂದ ಡಿಸೆಂಬರ್ 2021 ರ ವರೆಗೆ ವೈಟ್ ಫೀಲ್ಡ್ ಉಪವಲಯದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು ಅದೇ ವಾರ್ಡ್ ನಲ್ಲಿ ವರ್ತೂರು ಸೇರಿತ್ತು. ವರ್ತೂರು ಪೋಲೀಸರು ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಮ್.ಪಿ. ವೈಟ್ ಫೀಲ್ಡ್ ಉಪ ವಿಭಾಗ, ಮಹದೇವಪುರ ವಲಯ ಇವರಿಗೆ ಕೃತ್ಯ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ದಿನಾಂಕ 10-09-2018

ರಂದು ಪತ್ರ ವ್ಯವಹಾರ ಮಾಡಿರುತ್ತಾರೆ. ಸದರಿ ಸ್ಥಳ ನಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಇದ್ದ ಕಾರಣ ದಿನಾಂಕ 15-10-2018 ರಂದು ಪೋಲೀಸ್ ಕಾನ್ಸ್ ಟೇಬಲ್ 14730 ಸುಗರೇಶನ್ ಇವರು ತೋರಿಸಿದ ಸ್ಥಳದಲ್ಲಿ ನಾನು ಒಂದು ನಕ್ಷೆ ತಯಾರಿಸಿರುತ್ತೇನೆ. ನಂತರ ಅದನ್ನು ಪೋಲೀಸ್ ಅಧಿಕಾರಿಗಳಿಗೆ ಎ.ಇ.ಇ ಇವರ ಮೂಲಕ ಕಳುಹಿಸಿರುತ್ತೇನೆ. ಸದರಿ ಪೋಲೀಸ್ ಕಾನ್ಸ್ ಟೇಬಲ್ ಸ್ಥಳದಲ್ಲಿ ಕೊಲೆ ಆಗಿತ್ತು ಎಂದು ತಿಳಿಸಿದ್ದು ನಮ್ಮ ಕಛೇರಿಗೆ ಬಂದ ಪತ್ರದಲ್ಲೂ ಸಹ ಸದರಿ ವಿಚಾರ ಇತ್ತು. ಸಾಕ್ಷಿದಾರರು ಪೋಲೀಸರಿಂದ ತಮ್ಮ ಕಛೇರಿಗೆ ಬಂದ ಪತ್ರ, ಎ.ಇ.ಇ ರವರು ನಾನು ತಯಾರಿಸಿದ ನಕ್ಷೆಯೊಂದಿಗೆ ಕಳುಸಿದ್ದು, ಅದನ್ನು ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.27 ರಿಂದ 29 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿಪಿ.29 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ತಾನು ಬೇಟಿ ನೀಡಿ ನಕ್ಷೆ ತಯಾರಿಸಿದ ಸ್ಥಳವನ್ನು ನಿಪಿ.3 ರಿಂದ 5 ಫೋಟೋದಲ್ಲಿ ಇರುವುದಾಗಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎನ್.ಆರ್.ಎಸ್.ವಕೀಲರಿಂದಃ</u>

1. ನಾನು ನಿಪಿ.29 ನಕ್ಷೆಯನ್ನು ಸ್ಕೇಲ್ ಗೆ ಮಾಡಿಲ್ಲ ಎಂದರೆ ಸರಿ. ಸದರಿ ಸ್ಥಳದಲ್ಲಿ ವಿದ್ಯುತ್ ಕಂಬ ಇತ್ತು ಎಂದರೆ ಸಾಕ್ಷಿಯು ನಾನು ಗಮನಿಸಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ.29 ರಲ್ಲಿ ವಿದ್ಯುತ್ ಕಂಬ ಇರುವುದನ್ನು ತೋರಿಸಿಲ್ಲ ಎಂದರೆ

ಸಾಕ್ಷಿಯು ನಾನು ಅದನ್ನು ಗಮನಿಸಿಲ್ಲ ಎಂದು ಉತ್ತರಿಸಿರುತ್ತಾರೆ. ಕೃತ್ಯ ಸ್ಥಳವನ್ನು ಪಿರ್ಯಾದುದಾರರು ತೋರಿಸಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಬೇಟಿ ನೀಡಿದ ಸಮಯದಲ್ಲಿ ಅಲ್ಲಿ ಯಾವುದೇ ರಕ್ತದ ಕಲೆ ಇರಲಿಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿ ನಿಪಿ.29 ನಕ್ಷೆಯನ್ನು ತಯಾರಿಸದೆ ನನ್ನ ಕಛೇರಿಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರು ಹೇಳಿದಂತೆ ನಾನು ಸುಳ್ಳು ನಕ್ಷೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತ ಕೇಳಿ ಸುಳ್ಳು ನಕ್ಷೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃಇಲ್ಲ</u>

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.